**2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**
**ಸಿ ಸಿ ನಂ.715/2023**

| | | |
|---|---|---|
| ಹೆಸರು | ರೇಖಾ | PW -1 |
| ಗಂಡನ ಹೆಸರು | ರೇವಣಸಿದ್ದಯ್ಯ | CW -1 |
| ವಯಸ್ಸು | 40 ವರ್ಷ | |
| ಉದ್ಯೋಗ | ಕೂಲಿ | ದಿನಾಂಕಃ 23.10.2024 |
| ವಾಸ | ಮಲೆಬೆನ್ನೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**
**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 2 ರಿಂದ 6 ರವರ ಪರಿಚಯ ಇದೆ. ಆರೋಪಿತರ ನನ್ನ ದೂರದ ಸಂಬಂಧಿಗಳು.

ನಮ್ಮ ಮತ್ತು ಆರೋಪಿತರ ಮಧ್ಯ ಆಸ್ತಿ ವಿಚಾರವಾಗಿ ವೈಶಮ್ಯ ಇದ್ದು, ಈಗ ಕಳೆದ ಮೂರು ವರ್ಷಗಳ ಹಿಂದೆ ರಾತ್ರಿ 9.30 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ನಮ್ಮ ಮನೆಯ ಮುಂದೆ ಬಂದು ಮಿಂಡ್ರಿಗೆ ಹುಟ್ಟಿದವರೆ, ಹಾದರಗಿತ್ತೇರ ಎಂದು ಅವಾಚ್ಯ ಶಬ್ದಗಳಿಂದ ಬೈದರು, ಆಗ ನಾವು ಮನೆಯ ಹೊರಗೆ ಬಂದು ಕೇಳಿದಾಗ ಆರೋಪಿತರೆಲ್ಲರೂ ಸೇರಿ ನನಗೆ, ನನ್ನ ಗಂಡನಿಗೆ, ಪಾರ್ವತಮ್ಮ, ಶ್ರೀದೇವಿ, ಚೆನ್ನೇಶ ರವರಿಗೆ ಹೊಡೆದಿರುತ್ತಾರೆ. ಅಲ್ಲದೆ ಸರೋಜಮ್ಮ ಮತ್ತು ಇನ್ನೊಬ್ಬ ಚೆನ್ನೇಶ ಎನ್ನುವವರು ಸಹ ನಮಗೆ ಹೊಡೆದಿರುತ್ತಾರೆ. ನಂತರ ನನಗೆ 3 ನೇ ಆರೋಪಿಯು ನನ್ನ ಬಟ್ಟೆಯನ್ನು ಹಿಡಿದು ಹರಿದು ಹಾಕಿ, ಸರೋಜಮ್ಮ ಮತ್ತು ಚೆನ್ನೆಶ ರವರು ಅವರನ್ನು ಬಿಡಬೇಡಿ ಹೊಡೆದು ಹಾಕಿರಿ ಎಂದು ಜೀವ ಬೇದರಿಕೆ ಹಾಕಿದರು. ನಂತರ ಆರೋಪಿತರು ಜೀವ ಬೆದರಿಕೆ ಹಾಕಿದ್ದರಿಂದ ನಾವು ಹೆದರಿ ತಕ್ಷಣವೇ ದೂರನ್ನು ದಾಖಲಿಸಲಿಲ್ಲ. 3-4 ದಿನಗಳ ನಂತರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇವೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ದೂರಿನ ಆಧಾರದ ಮೇಲೆ ಪೊಲೀಸರು ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಮಹಜರ ಮಾಡಿರುತ್ತಾರೆ. ಆ ಕಾಲಕ್ಕೆ ಚಾಸಾ 2 ಮತ್ತು 3 ರವರು ಹಾಜರಿದ್ದರು. ಆ ಕಾಲಕ್ಕೆ ಪೊಲೀಸರು ನಾನು ಹಾಜರು ಪಡಿಸಿದ ಒಂದು ಕೆಂಪು ಬಣ್ಣದ ನೈಟಿ ಯನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಂಜೆ 5.00 ರಿಂದ 6.00 ಗಂಟೆವರೆಗೆ ಪೊಲೀಸರು ಜರುಗಿಸಿರುತ್ತಾರೆ. ಆ ಕಾಲಕ್ಕೆ ಪೊಲೀಸರು ಒಂದು ಕಚ್ಚಾ ನಕಾಶೆಯನ್ನು ತಯಾರಿಸಿ ಒಂದು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆ, ಕಚ್ಚಾ ನಕಾಶೆ ಹಾಗೂ ಛಾಯಾಚಿತ್ರವನ್ನು ನಿಪಿ 2 ರಿಂದ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಮತ್ತು ನಿಪಿ 3(ಎ) ಎಂದು ಗುರುತಿಸಲಾಯಿತು. ಪೊಲೀಸರು ವಶಪಡಿಸಿಕೊಂಡ ಕೆಂಪು ಬಣ್ಣದ ನೈಟಿಯನ್ನು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ನನ್ನ ಹೇಳಿಕೆಯಲ್ಲಿ ಸೋರಜಮ್ಮ ಮತ್ತು ಚೆನ್ನೇಶ ರವರು ಗಲಾಟೆಯಲ್ಲಿ ಭಾಗಿಯಾಗಿರಲಿಲ್ಲ ಎಂದು ಹೇಳಿಕೆ ನೀಡಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಹರಿಹರ.